**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 356 ಅಮುಕಾ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 18.9.2020

**ಪರಿಷ್ಕೃತ ಸುತ್ತೋಲೆ**

**ವಿಷಯ:** ಕಂಟೇನ್ಮೆಂಟ್ ಹಾಗೂ ಬಫರ್ ವಲಯಗಳ ಬಗ್ಗೆ ಪರಿಷ್ಕೃತ ಮಾರ್ಗಸೂಚಿಗಳು (ಆವೃತ್ತಿ -5)

**ಉಲ್ಲೇಖ:** 1. ನೋವೆಲ್ ಕೊರೋನಾ ವೈರಸ್ ಸೋಂಕು (ಕೋವಿಡ್ 19) ,ಕಂಟೇನ್ಮೆಂಟ್ ಯೋಜನೆ,ಆವೃತ್ತಿ 2, ಕುರಿತಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ, ಇವರ ಮಾರ್ಗಸೂಚಿ, ದಿನಾಂಕ: 16.05.2020.

2. ಕಂಟೇನ್ಮೆಂಟ್ ಹಾಗೂ ಬಫರ್ ವಲಯಗಳ ಬಗ್ಗೆ ಪರಿಷ್ಕೃತ ಮಾರ್ಗಸೂಚಿಗಳು, ಸುತ್ತೋಲೆ ಸಂಖ್ಯೆ: HFW 311 ACS 2020, ದಿನಾಂಕ: 18.8.2020.

3. ರಾಜ್ಯ ಮಟ್ಟದ ಕೋವಿಡ್ 19 ತಾಂತ್ರಿಕ ಸಲಹಾ ಸಮಿತಿಯ 30 & 31 ನೇ ಸಭೆಯ ನಡಾವಳಿಗಳು, ದಿನಾಂಕ: 27.8.2020 ಹಾಗೂ 29.8.2020.

*********

ರಾಜ್ಯದಲ್ಲಿ ಕೋವಿಡ್-19 ಹೆಚ್ಚುತ್ತಿರುವ ಸಂದರ್ಭದಲ್ಲಿ, ಹೆಚ್ಚಿನ ಸಂಖ್ಯೆಯ ಕೋವಿಡ್ ಪ್ರಕರಣಗಳು ಅಕ್ಕ -ಪಕ್ಕದಲ್ಲಿರುವ / ಹತ್ತಿರದಲ್ಲಿಯೇ ಇರುವ ಮನೆಗಳು ಅಥವಾ ಅಪಾರ್ಟ್‌ಮೆಂಟ್ / ವಸತಿ ಸಮುಚ್ಛಯಗಳಲ್ಲಿ ವರದಿಯಾಗುತ್ತಿವೆ. ಇದರಿಂದ ಕಂಟೇನ್ಮೆಂಟ್ ವಲಯಗಳ ಸಂಖ್ಯೆಯು ಮಿತಿ ಮೀರಿದ್ದು, ಪ್ರಾಧಿಕಾರಗಳಿಗೆ ಸರ್ವೇಕ್ಷಣಾ ಚಟುವಟಿಕೆಗಳನ್ನು ಸುಲಭವಾಗಿ ಕೈಗೊಳ್ಳಲು ಅಡ್ಡಿಯಾಗುವುದೇ ಅಲ್ಲದೇ, ಪರಿಧಿ ವಲಯ ನಿಯಂತ್ರಣ (Perimeter control) ವನ್ನೂ ಸಹ ಖಚಿತಪಡಿಸಿಕೊಳ್ಳುವುದು ಕಷ್ಟಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಕಂಟೇನ್ಮೆಂಟ್ ಜೋನ್ ಹಾಗೂ ಬಫರ್ ವಲಯಗಳ ಅಧಿಸೂಚನೆ ಹಾಗೂ ಮುಕ್ತಗೊಳಿಸುವುದರ (ಸಡಿಲಿಸುವಿಕೆ) ಕುರಿತು ಈ ಕೆಳಕಂಡಂತೆ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಲಾಗಿದೆ.

**1) ಕಂಟೇನ್ಮೆಂಟ್ ವಲಯವೆಂದು ಅಧಿಸೂಚನೆ ಹೊರಡಿಸುವುದು**

**1.1 ಕಂಟೇನ್ಮೆಂಟ್ ವಲಯ** : ಕೋವಿಡ್ – 19 (ನೋವೆಲ್ ಕೊರೋನಾ ವೈರಸ್) ದೃಢಪಟ್ಟ ಪ್ರಕರಣ / ವ್ಯಕ್ತಿಯು ವಾಸವಿರುವ ಮನೆಯ ಸುತ್ತಲಿನ ಸುಸ್ಪಷ್ಟ (well-defined) ಪ್ರದೇಶವನ್ನು ಕಂಟೇನ್ಮೆಂಟ್ ವಲಯವೆಂದು ಕರೆಯಲಾಗುತ್ತದೆ. ಸದರಿ ಪ್ರದೇಶದಲ್ಲಿ ಸೋಂಕು ಹರಡದಂತೆ ತೀವ್ರ ಗತಿಯಲ್ಲಿ ಅಗತ್ಯ ಕ್ರಮಗಳನ್ನು ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ.

**1.2 'ಪ್ರದೇಶ'ವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ:**

1.2.1 ಒಂದು ಪ್ರದೇಶದಲ್ಲಿ ≥ 20 ಸಕ್ರಿಯ ಕೋವಿಡ್ ಪ್ರಕರಣಗಳು 100 ಮೀಟರ್ ತ್ರಿಜ್ಯದಲ್ಲಿದ್ದ (radius) ಪಕ್ಷದಲ್ಲಿ ಅಂತಹ ಪ್ರದೇಶವನ್ನು ಕಂಟೇನ್ಮೆಂಟ್ ವಲಯವೆಂದು ಅಧಿಸೂಚಿಸಬಹುದಾಗಿದೆ. (ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ)

1.2.2 : ಕಂಟೇನ್ಮೆಂಟ್ ವಲಯದ ಅಳತೆ ಹಾಗೂ ಗಡಿರೇಖೆಯು ಈ ಕೆಳಗಿನ ಅಂಶಗಳ ಮೇಲೆ ನಿರ್ಧಾರಿತವಾಗುತ್ತದೆ.

- ಪ್ರಕರಣಗಳು ಹಾಗೂ ಸಂಪರ್ಕಿತರನ್ನು ಮ್ಯಾಪ್ ಮಾಡುವ ಮೂಲಕ.
- ಪ್ರಕರಣಗಳು ಹಾಗೂ ಸಂಪರ್ಕಿತರ ಭೌಗೋಳಿಕ ಪ್ರಸರಣದ (Geographical dispersion) ಆಧಾರದ ಅನ್ವಯ.
- ಗುರುತಿಸಲಾದ ಪರಿಧಿ ವಲಯ (well demarcated perimeter) ಆಧಾರದ ಮೇಲೆ.
- ಪರಿಧಿ ವಲಯ ನಿಯಂತ್ರಣವನ್ನು ( perimeter control) ಜಾರಿಗೊಳಿಸುವಿಕೆ.

1.2.3 ಈ ಮಾನದಂಡಗಳ ಆಧಾರದ ಮೇಲೆ, ಜಿಲ್ಲಾಧಿಕಾರಿಗಳು / ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಸ್ಥಳೀಯವಾದ ತಾಂತ್ರಿಕ ಸಲಹೆ / ಸೂಚನೆಗಳೊಂದಿಗೆ ಈ ಪ್ರದೇಶವನ್ನು ರಸ್ತೆಗಳು, ಪಾರ್ಕ್‌ಗಳು, ಚರಂಡಿಗಳು ಅಥವಾ ಭೌಗೋಳಿಕವಾಗಿ ಪ್ರತ್ಯೇಕಿಸಲು ಸೂಕ್ತವೆನಿಸುವ ಇನ್ನಾವುದೇ ವೈಶಿಷ್ಟ್ಯಗಳ ಆಧಾರದ ಮೇಲೆ ಪರಿಧಿ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗುರುತಿಸುವರು.

1.2.4 <u>ಮನೆಯಲ್ಲಿಯೇ ಒಬ್ಬರು ಪ್ರತ್ಯೇಕವಾಗಿರುವ ಅಥವಾ ಕೋವಿಡ್ ಕೇರ್ ಸೆಂಟರ್ / ಕೋವಿಡ್ ಆಸ್ಪತ್ರೆಗೆ ದಾಖಲಾಗಿರುವ ಒಂದು ಕೋವಿಡ್ 19 ಪ್ರಕರಣದ ಆಧಾರದ ಮೇಲೆ ಕಂಟೇನ್ಮೆಂಟ್ ವಲಯವನ್ನು ಅಧಿಸೂಚಿಸಲಾಗುವುದಿಲ್ಲ.</u>

1.2.5. ಒಂದೆರೆಡು ಮಾತ್ರ ಪ್ರಕರಣಗಳಿದ್ದಲ್ಲಿ ನೆರೆ ಹೊರೆಯವರಿಗೆ/ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್ / ವಸತಿ ಸಮುಚ್ಚಯದ ಮಾಲೀಕರ ಅಸೋಸಿಯೇಷನ್‌ಗೆ ಮಾಹಿತಿ ನೀಡುವುದು, ಸಂಪರ್ಕಿತರನ್ನು ಗುರುತಿಸುವುದು, ಹೋಂ ಕ್ವಾರೆಂಟೈನ್ ನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿವುದು, ಸಂಪರ್ಕಿತರನ್ನು ಪರೀಕ್ಷೆಗೆ ಒಳಪಡಿಸುವುದನ್ನು ಖಚಿತಪಡಿಸಿಕೊಳ್ಳುವುದು, ಇತ್ಯಾದಿಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ಆ ರಸ್ತೆಯ ಎಲ್ಲಾ ಮನೆಗಳಲ್ಲಿ ಐ ಎಲ್ ಐ ಪ್ರರಕರಣಗಳಿಗಾಗಿ ಸಮೀಕ್ಷೆ ಹಾಗೂ ಶಿಷ್ಟಾಚಾರದಂತೆ ಪರೀಕೆಯನ್ನು ನಡೆಸಬೇಕು. <u>ಇಂತಹ ಸ್ಥಳಗಳಲ್ಲಿ ಪ್ರಕರಣದ ಮನೆಯ ಮೇಲೆ ನೋಟಿಸ್ ಅಂಟಿಸುವುದು, ಕಠಿಣ ಬ್ಯಾರಿಕೇಡ್ ಗಳನ್ನು ಅಳವಡಿಸುವ ಅಗತ್ಯವಿರುವುದಿಲ್ಲ. ಪ್ರಕರಣಗಳ ಹಾಗೂ ಸಂಪರ್ಕಿತರ ಹ್ಯಾಂಡ್ ಸ್ವ್ಯಾಪಿಂಗ್‌ನ ಅಗತ್ಯವಿರುವುದಿಲ್ಲ.</u>

**1.3 <u>ಬಫರ್ ವಲಯ</u>**

ಹೊಸದಾಗಿ ಕೋವಿಡ್ 19 ಪ್ರಕರಣಗಳು ವರದಿಯಾಗುವ ಸಂಭವವಿರುವ ಪ್ರದೇಶವನ್ನು 'ಬಫರ್ ವಲಯ' ಎಂದು ವ್ಯಾಖ್ಯಾನಿಸಲಾಗುತ್ತದೆ.

- <u>ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಅನ್ವಯವಾಗುವಂತೆ, ಕಂಟೇನ್ಮೆಂಟ್ ವಲಯದ ಸುತ್ತಲಿನ 200 ಮೀಟರ್ ತ್ರಿಜ್ಯದ (radius) ಪ್ರದೇಶವನ್ನು ಬಫರ್ ವಲಯ ಎಂದು ಕರೆಯಲಾಗುತ್ತದೆ.</u>

ಜಿಲ್ಲಾಧಿಕಾರಿಗಳು / ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಮೇಲೆ ತಿಳಿಸಿದ ಮಾನದಂಡಗಳ ಅನ್ವಯ ರಸ್ತೆಗಳು, ಪಾರ್ಕ್‌ಗಳು, ಚರಂಡಿಗಳು ಅಥವಾ ಭೌಗೋಳಿಕವಾಗಿ ಪ್ರತ್ಯೇಕಿಸಲು ಸೂಕ್ತವೆನಿಸುವ ಇನ್ನಾವುದೇ ವೈಶಿಷ್ಟ್ಯಗಳ ಆಧಾರದ ಬಫರ್ ವಲಯವನ್ನು ಗುರುತಿಸುವರು.

2) ಸಕ್ರಿಯ ಸರ್ವೇಕ್ಷಣೆ:

ಕಂಟೇನ್ಮೆಂಟ್ ವಲಯ ಹಾಗೂ ಬಫರ್ ವಲಯದಲ್ಲಿ ಕೋವಿಡ್ 19 ಸೋಂಕು ಹರಡುವುದನ್ನು ತಪ್ಪಿಸಲು / ನಿಯಂತ್ರಿಸಲು, ಸಕ್ರಿಯ ಸಮೀಕ್ಷೆ ನಡೆಸಬೇಕು ಹಾಗೂ ದೈಹಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಕಂಟೇನ್ಮೆಂಟ್ ದಲ್ಲಿ ಮನೆ ಮನೆ ಸಮೀಕ್ಷೆಯನ್ನು ಪ್ರತಿದಿನ ನಡೆಸಬೇಕು ಹಾಗೂ ಬಫರ್ ವಲಯದಲ್ಲಿ ಕಡ್ಡಾಯವಾಗಿ ವಾರದಲ್ಲಿ ಎರಡು ಬಾರಿ ನಡೆಸಬೇಕು. ಕಂಟೇನ್ಮೆಂಟ್ ವಲಯದಲ್ಲಿ ಕೋವಿಡ್ ಪರೀಕ್ಷೆಯನ್ನು ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಲಾಗುವ ಸುತ್ತೋಲೆಯ ಅನ್ವಯ ಕೈಗೊಳ್ಳಬೇಕು.

3) ಕಂಟೇನ್ಮೆಂಟ್ ವಲಯವನ್ನು ಸಡಿಲಗೊಳಿಸುವುದು:

ಒಂದು ಪ್ರದೇಶದಲ್ಲಿ ಖಚಿತ ಕೋವಿಡ್-19 ಪ್ರಕರಣವು ವರದಿಯಾದ ಕನಿಷ್ಠ 14 ದಿನಗಳ ನಂತರ, 20ಕ್ಕಿಂತ ಕಡಿಮೆ ಸಕ್ರಿಯ ಕೋವಿಡ್ ಪ್ರಕರಣಗಳಿದ್ದಲ್ಲಿ ಕಂಟೇನ್ಮೆಂಟ್ ವಲಯವು ಸಾಮಾನ್ಯ ಸ್ಥಿತಿ / ಯಥಾ ಸ್ಥಿತಿಗೆ ಮರಳುತ್ತದೆ. ಇದರ ಮೌಲ್ಯಮಾಪನವನ್ನು ಪ್ರತಿ ವಾರವೂ, ಘಟನಾ ದಂಡನಾಯಕ (incident commander)/ ಆಯಾ ಜಿಲ್ಲಾಧಿಕಾರಿಗಳು / ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ನಡೆಸುವರು.

4. ಪರಿಧಿ ವಲಯ ನಿಯಂತ್ರಣ (Perimeter control) , ಘಟನಾ ದಂಡನಾಯಕ, ಪೊಲೀಸ್ ಇಲಾಖೆ , ಗ್ರಾಮ ಪಂಚಾಯತ್ ಹಾಗೂ ಆರೋಗ್ಯ ಇಲಾಖೆಯ ಪಾತ್ರ ಹಾಗೂ ಅಗತ್ಯ ವಸ್ತುಗಳ ಸರಬರಾಜು ಮತ್ತು ನಿರ್ವಹಣೆಯನ್ನು ಈಗಾಗಲೇ ಚಾಲ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಮಾರ್ಗಸೂಚಿ, ದಿನಾಂಕ : 21.5.2020 ಯ ಅನ್ವಯ ಕೈಗೊಳ್ಳುವುದು(https://covid19.karnataka.gov.in/storage/pdf-files/SOP%20-%20CONTAINMENT%20ZONE%20CLUSTER%20CIRCULAR%20BY%20CS.pdf)

5. ವರದಿಯಾದ ಕೊನೆಯ ಖಚಿತ ಕೋವಿಡ್-19 ಪ್ರಕರಣವು ಆಸ್ಪತ್ರೆಯಿಂದ / ಹೋಂ ಐಸೋಲೇಷನ್ ನಿಂದ ಬಿಡುಗಡೆ ಹೊಂದಿದ 28 ದಿನಗಳ ನಂತರವಷ್ಟೇ ಯಾವುದೇ ಗ್ರಾಮ/ ನಗರ/ಜಿಲ್ಲೆ / ರಾಜ್ಯವನ್ನು ಕೋವಿಡ್ 19 ಮುಕ್ತ ಎಂದು ಘೋಷಿಸಬಹುದಾಗಿದೆ.

ಜಾವೇದ್ 18/09/2020

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ,

1. ಆಯುಕ್ತರು, ಬಿ ಬಿ ಎಂ ಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
5. ಅಭಿಯಾನ ನಿರ್ದೇಶಕರು , ರಾಷ್ಟ್ರೀಯ ಆರೋಗ್ಯ ಅಭಿಯಾನ
6. ನಿರ್ದೇಶಕರು – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
7. ನಿರ್ದೇಶಕರು – ವೈದ್ಯಕೀಯ ಶಿಕ್ಷಣ
8. ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳು
9. ಎಲ್ಲಾ ಜಿಲ್ಲಾ ಸರ್ಜನ್‌ಗಳು ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು

ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು,
3. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು,